# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 457 ವೆಚ್ಚ 6/2021 ಇ

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:16.9.2021

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು

ರವರಿಗೆ:

ಖಜಾನೆ ಆಯುಕ್ತರು,
ಖಜಾನೆ ಆಯುಕ್ತಾಲಯ, 5 & 6 ನೇ ಮಹಡಿ,
ಕೆಪಿಸಿಎಲ್ ಹಸಿರು ಕಟ್ಟಡ, ಅರಮನೆ ರಸ್ತೆ,
ಬೆಂಗಳೂರು-560001

ಮಾನ್ಯರೆ,

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಿಂದ ಬಾಕಿ ವೇತನ ಸೆಳೆಯಲು ಸಹಮತಿ ಕೋರಿರುವ ಬಗ್ಗೆ

ಉಲ್ಲೇಖ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಂದ ಸ್ವೀಕೃತವಾಗಿರುವ ಪತ್ರಗಳು

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಇತರೆ ಇಲಾಖೆಗಳಲ್ಲಿ ವಿವಿದ ಕಾರಣಗಳಿಂದ ಅಂದರೆ ರಜೆ ಮಂಜೂರಾತಿ, ವೇತನ ಬಡ್ತಿ, ನಿವೃತ್ತ ಮತ್ತು ಮೃತಿಯಾಗಿರುವ ಸಿಬ್ಬಂದಿಯವರ ಅವಲಂಬಿತರಿಗೆ ಬಾಕಿ ವೇತನವನ್ನು ಪಾವತಿಸಬೇಕಾಗಿರುವುದರಿಂದ ಲಭ್ಯವಿರುವ ಅನುದಾನದಿಂದ ಸೆಳೆಯಲು ಸುತ್ತೋಲೆ ಸಂಖ್ಯೆ ಆಇ 01 ಟಿಎಫ್‌ಪಿ 2021 ದಿನಾಂಕ:3.8.2021ರಲ್ಲಿನ ಷರತ್ತನ್ನು ಸಡಿಲಗೊಳಿಸಿ ಬಾಕಿ ವೇತನವನ್ನು ಸೆಳೆಯಲು ಅವಕಾಶ ನೀಡುವಂತೆ ಸಂಬಂಧಿಸಿದ ಖಜಾನಾದಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಪತ್ರಗಳನ್ನು ಬರೆದಿದ್ದು ಸದರಿ ಪತ್ರಗಳನ್ನು ಡೌನ್ ಲೋಡ್ ಮಾಡಿ ವ್ಯವಹಾರ ಪುಟದಲ್ಲಿರಿಸಲಾಗಿದೆ. ವಿವರ ಕೆಳಕಂಡಂತೆ ಇರುತ್ತದೆ:

| ಕ್ರ.ಸಂ. | ಜಿಲ್ಲಾ/ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಷರಾ |
|---|---|---|---|
| 1 | ಜಿ.ಪಂ. ದಾವಣಗೆರೆ | 2059-00-101-0-26-005 | ದಿ:ನಾಗರಾಜ್, ಕಿ.ಇಂ. ಇವರ ಬಾಕಿ ವೇತನವನ್ನು ಮೃತರ ಅವಲಂಬಿತರಿಗೆ ಪಾವತಿಸಲು |

| | | | |
|---|---|---|---|
| 2 | ಜಿ.ಪಂ.ಮಂಡ್ಯ | 2515-00-101-0-28-005 | ಉಪ ಕಾರ್ಯದರ್ಶಿ( ಆಡಳಿತ), ಅಧೀಕ್ಷಕರು ಮತ್ತು ಲೆಕ್ಕಾಧೀಕ್ಷಕರುಗಳ ಬಾಕಿ ವೇತನವನ್ನು ಸೆಳೆಯಲು |
| 3 | ಜಿ.ಪಂ.ಕೋಲಾರ | 2205-00-104-0-27-005<br>2435-00-101-0-27-005 | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತ ಸಹಾಯಕ ನಿರ್ದೇಶಕರ ಬಾಕಿ ವೇತನವನ್ನು ಸೆಳೆಯಲು |
| 4 | ತಾ.ಪಂ. ಹಿರಿಯೂರು | 2515-00-102-0-61-005 | ಸಿಬ್ಬಂದಿಯವರುಗಳ ಬಾಕಿ ವೇತನವನ್ನು ಸೆಳೆಯಲು |
| 5 | ತಾ.ಪಂ. ಮಂಡ್ಯ | 2515-00-102-0-61-005 | ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ದ್ವಿ.ದ.ಲೆ.ಸ. ರುಗಳ ಬಾಕಿ ವೇತನವನ್ನು ಸೆಳೆಯಲು |
| 6 | ತಾ.ಪಂ. ವಿಜಯಪುರ | 2515-00-102-0-61-005 | ಶ್ರೀ ಮಲಕಪ್ಪ, ಕಾರ್ಯದರ್ಶಿ ಗ್ರೇಡ್-I ಇವರ ಬಾಕಿ ವೇತನ ಸೆಳೆಯಲು |
| 7 | ತಾ.ಪಂ. ರೋಣ | 2515-00-102-0-61-005 | ಶ್ರೀ ಎಸ್.ಡಿ.ನಾಗೋಡ್, ನಿವೃತ್ತ ಕಿ.ಇಂ. ಇವರ ಬಾಕಿ ವೇತನ ಪಾವತಿಗಾಗಿ |
| 8 | ತಾ.ಪಂ. ಕುರಗೋಡು | 2515-00-102-0-61-005 | ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ಬಾಕಿ ವೇತನವನ್ನು ಸೆಳೆಯಲು |

ಪ್ರಸ್ತಾವನೆಯು ಬಾಕಿ ವೇತನವನ್ನು ಲಭ್ಯವಿರುವ ಅನುದಾನದಿಂದ ಭರಿಸಲು ಹಾಗೂ ಇದಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರದಿರುವ ಷರತ್ತನ್ನು ವಿಧಿಸಿ ಬಾಕಿ ವೇತನವನ್ನು ಸೆಳೆಯಲು ಸುತ್ತೋಲೆಯ ಷರತ್ತನ್ನು ಸಡಿಲಿಸಿ ಸಹಮತಿಸಿದೆ. ಅದರಂತೆ ಬಾಕಿ ವೇತನ ಸೆಳೆಯಲು ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವಂತೆ ಸಂಬಂಧಪಟ್ಟವರಿ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

(ಸರ್ಕಾರದ ಕಾರ್ಯದರ್ಶಿಗಳು(ವೆಚ್ಚ)
ಆರ್ಥಿಕ ಇಲಾಖೆರವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಶ್ರೀಕೃಷ್ಣ ಎನ್.ಬಾಗಟ್ಯಾಗೋಳ)
ವಿಶೇಷಾಧಿಕಾರಿ(ಜಿಪಂ) ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಪ್ರತಿ:
1. ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು
2. ಸಂಬಂಧಪಟ್ಟ ಜಿಲ್ಲಾ/ಉಪ ಖಜಾನೆ ಅಧಿಕಾರಿಗಳಿಗೆ ಸಲ್ಲಿಸುವ ಬಿಲ್ಲುಗಳನ್ನು ಮಾನ್ಯ ಮಾಡುವ ಬಗ್ಗೆ